# ವಿದ್ಯಾರ್ಥಿಗಳು ಸಮಯದ ಸದ್ಬಳಕೆ ಮಾಡಿಕೊಳ್ಳಿ

## ಕೆಎಲ್‌ಎಸ್ ವಿಡಿಐಟಿಯಲ್ಲಿ ಸಿಇಟಿ ತರಬೇತಿ ಸಮಾರೋಪ ಸಮಾರಂಭ



**ಹಳಿಯಾಳ:** ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಸಮಯದ ಸದ್ಬಳಕೆ ಮಾಡಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಬೆಂಗಳೂರಿನ ಕ್ಯಾಡ್ ಕಾನ್ ಪ್ರೈ. ಲಿ. ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಅಭಿರಾಮ್ ಹೇಳಿದರು.

ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಮಹಾವಿದ್ಯಾಲಯದಲ್ಲಿ ವಿಕಾಸನ ಫೌಂಡೇಶನ್ ಸಂಸ್ಥೆ ಆಯೋಜಿತ ಸಿ ಇ ಟಿ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ನುರಿತ ಶಿಕ್ಷಕರಿಂದ ಅಗತ್ಯವಾದ ಮಾರ್ಗದರ್ಶನ ನೀಡುವ ವಿದ್ಯಾಮೃತ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಥಿತಿಗಳಾಗಿ ಆಗಮಿಸಿದ್ದ ದಾಂಡೇಲಿ ಜೆ ಟಿ ಟಿ ಸಿ ಯ ಪ್ರಾಂಶುಪಾಲ ಪ್ರೊ. ದತ್ತಾತ್ರಿ ಜೀವನದಲ್ಲಿ ಸಾಫಲ್ಯತೆಯನ್ನು ಕಾಣಲು ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಇಟ್ಟುಕೊಳ್ಳುವುದು ಅಗತ್ಯ ಹಾಗೂ ಆ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿದರು.

ಬೆಂಗಳೂರಿನ ಕ್ಯಾಡ್ಕಾನ್ ಸಂಸ್ಥೆಯ ಮಾರುಕಟ್ಟೆ ಮುಖ್ಯಸ್ಥ ಚೇತನ್ ಎಂ ಮಾತನಾಡಿ, ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ವಿಕಸನ ಫೌಂಡೇಶನ್ ವಿದ್ಯಾಮೃತ 2024 ಕಾರ್ಯಕ್ರಮವನ್ನು ಶ್ಲಾಘಿಸುತ್ತ, ಉನ್ನತ ಶಿಕ್ಷಣ ಆಕಾಂಕ್ಷಿತ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಡಾ. ರವೀಂದ್ರ ಮುನ್ನೊಳ್ಳಿ ಸ್ವಾಗತಿಸಿದರು. ಡಾ. ಸಮೀರ್ ಗಲಗಲಿ ವಂದಿಸಿದರು. ಡೀನ್ ಎಫ್ ಐ ಐ ಐ ಪ್ರೊ. ಸುಧೀರ್ ಕುಲಕರ್ಣಿ ನಿರೂಪಿಸಿದರು.

ವಿಕಾಸನ ಫೌಂಡೇಶನ್ ಸಂಸ್ಥೆಯು ವಿದ್ಯಾಮೃತ 2024 ಯೋಜನೆಯ ಅಡಿಯಲ್ಲಿ ಅರ್ಹ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕೆ ಸಿ ಇ ಟಿ ಅಧ್ಯಯನ ಮತ್ತು ವೃತ್ತಿಪರ ಕೋರ್ಸ್ ಆಯ್ಕೆಗೆ ಸಹಾಯ ನೀಡಿದೆ. ಈ ಹತ್ತು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಅನುಭವಿ ಶಿಕ್ಷಕರಿಂದ ಸಿ ಇ ಟಿ ಕೌನ್ಸಿಲಿಂಗ್ ಕುರಿತು ಮಾರ್ಗದರ್ಶನವನ್ನು ನೀಡಲಾಯಿತು. ಅಷ್ಟೇ ಅಲ್ಲದೆ ವಿದ್ಯಾಮೃತ ಕಾರ್ಯಕ್ರಮದಲ್ಲಿ ಕೆ ಸಿ ಇ ಟಿ ಪರೀಕ್ಷೆಗೆ ಪೂರಕವಾಗುವ ವಿಡಿಯೋಗಳು, ಸಾವಿರಕ್ಕೂ ಅಧಿಕ ಪ್ರಶ್ನೋತ್ತರಗಳು, ಅಣುಕು ಪರೀಕ್ಷೆ, ವೃತ್ತಿಪರ ಕೋರ್ಸ್‌ಗಳ ಕುರಿತು ಮಾರ್ಗದರ್ಶನವನ್ನು ಆನ್ಲೈನ್ ಮುಖಾಂತರ ನೀಡಲಾಯಿತು.

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ವಿದ್ಯಾರ್ಥಿ ಮಂದಿರ, ಟೀಚರ್ ಆಪ್ ಹಾಗೂ ಸ್ವಾಮಿ ವಿವೇಕಾನಂದ ಶ್ರೇಷ್ಠತಾ ಭಾರತ ಪ್ರತಿಷ್ಠಾನ ಇವರ ಪ್ರಾಯೋಜಕತ್ವದಲ್ಲಿ ವಿಕಾಸ ಫೌಂಡೇಶನ್ ಈ ಕಾರ್ಯಕ್ರಮವನ್ನು ಕೈಗೊಂಡಿದೆ.

ಈ ಕಾರ್ಯಕ್ರಮವನ್ನು ಡಾ. ವಿನೋದ್ ನಾಯಕ್, ರಾಜೇಶ್ ನಿರ್ವಾಣಿ ಸಂಯೋಜಿಸಿದ್ದರು. ಸಿ ಇ ಟಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ, ವೃತ್ತಿಪರ ಕೋರ್ಸ್ ಅನ್ನು ಆಯ್ದುಕೊಳ್ಳಲು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ವಿಕಾಸ ಫೌಂಡೇಶನ್ ಆಯೋಜಿಸಿದ್ದ ವಿದ್ಯಾಮೃತ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಸಿ ಇ ಟಿ ಪರೀಕ್ಷೆಗೆ ತರಬೇತಿ ಪಡೆದುಕೊಂಡರು.

# ವಿದ್ಯಾರ್ಥಿಗಳು ಸಮಯದ ಸದ್ಬಳಕೆ ಮಾಡಿಕೊಳ್ಳಲಿ: ಅಭಿರಾಮ್

**ಹಳಿಯಾಳ:** ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಸಮಯದ ಸದ್ಬಳಕೆ ಮಾಡಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಬೆಂಗಳೂರಿನ ಕ್ಯಾಡ್ ಕಾನ್ ಪ್ರೈ. ಲಿ. ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಅಭಿರಾಮ್ ಹೇಳಿದರು.

ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಮಹಾವಿದ್ಯಾಲಯದಲ್ಲಿ ವಿಕಾಸನ ಫೌಂಡೇಶನ್ ಸಂಸ್ಥೆ ಆಯೋಜಿತ ಸಿಇಟಿ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ನುರಿತ ಶಿಕ್ಷಕರಿಂದ ಅಗತ್ಯವಾದ ಮಾರ್ಗದರ್ಶನ ನೀಡುವ ಕಾರ್ಯಕ್ರಮ ವಿದ್ಯಾಮೃತ 2024 ಸಮಾರೋಪದಲ್ಲಿ ಅವರು ಮಾತನಾಡಿದರು.

ಬೆಂಗಳೂರಿನ ಕ್ಯಾಡ್ಕಾನ್ ಸಂಸ್ಥೆಯ ಮಾರುಕಟ್ಟೆ ಮುಖ್ಯಸ್ಥ ಚೇತನ್ ಎಂ. ಇದ್ದರು. ಡಾ. ರವೀಂದ್ರ ಮುನ್ನೊಳ್ಳಿ ಸ್ವಾಗತಿಸಿದರು. ಡಾ. ಸಮೀರ್ ಗಲಗಲಿ ವಂದಿಸಿದರು. ಡೀನ್ ಎಫ್ ಐ ಐ ಐ ಪ್ರೊ. ಸುಧೀರ್ ಕುಲಕರ್ಣಿ ನಿರೂಪಿಸಿದರು. ವಿಕಾಸನ ಫೌಂಡೇಶನ್ ಸಂಸ್ಥೆಯು ವಿದ್ಯಾಮೃತ 2024 ಯೋಜನೆಯ ಅಡಿಯಲ್ಲಿ ಅರ್ಹ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕೆ ಸಿ ಇ ಟಿ ಅಧ್ಯಯನ ಮತ್ತು ವೃತ್ತಿಪರ ಕೋರ್ಸ್ ಆಯ್ಕೆಗೆ ಸಹಾಯ ನೀಡಿದೆ. ಈ ಹತ್ತು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಅನುಭವಿ ಶಿಕ್ಷಕರಿಂದ ಸಿ ಇ ಟಿ ಕೌನ್ಸಿಲಿಂಗ್ ಕುರಿತು ಮಾರ್ಗದರ್ಶನವನ್ನು ನೀಡಲಾಯಿತು. ಅಷ್ಟೇ ಅಲ್ಲದೆ ವಿದ್ಯಾಮೃತ ಕಾರ್ಯಕ್ರಮದಲ್ಲಿ ಕೆ ಸಿ ಇ ಟಿ ಪರೀಕ್ಷೆಗೆ ಪೂರಕವಾಗುವ ವಿಡಿಯೋಗಳು, ಸಾವಿರಕ್ಕೂ ಅಧಿಕ ಪ್ರಶ್ನೋತ್ತರಗಳು, ಅಣುಕು ಪರೀಕ್ಷೆ, ವೃತ್ತಿಪರ ಕೋರ್ಸ್ ಗಳ ಕುರಿತು ಮಾರ್ಗದರ್ಶನವನ್ನು ಆನ್ಲೈನ್ ಮುಖಾಂತರ ನೀಡಲಾಯಿತು.

ರಾಮಕೃಷ್ಣ ಮಠ ಮತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರ, ಟೀಚರ್ ಆಪ್ ಹಾಗೂ ಸ್ವಾಮಿ ವಿವೇಕಾನಂದ ಶ್ರೇಷ್ಠತಾ ಭಾರತ ಪ್ರತಿಷ್ಠಾನ ಇವರ ಪ್ರಾಯೋಜಕತ್ವದಲ್ಲಿ ವಿಕಾಸ ಫೌಂಡೇಶನ್ ಈ ಕಾರ್ಯಕ್ರಮವನ್ನು ಕೈಗೊಂಡಿದೆ. ಈ ಕಾರ್ಯಕ್ರಮವನ್ನು ಡಾ. ವಿನೋದ್ ನಾಯಕ್, ರಾಜೇಶ್ ನಿರ್ವಾಣಿ ಸಂಯೋಜಿಸಿದ್ದರು .ಸಿ ಇ ಟಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ, ವೃತ್ತಿಪರ ಕೋರ್ಸ್ ಅನ್ನು ಆಯ್ದುಕೊಳ್ಳಲು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ವಿಕಾಸ ಫೌಂಡೇಶನ್ ಆಯೋಜಿಸಿದ್ದ ವಿದ್ಯಾಮೃತ 2024 ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಸಿಇಟಿ ಪರೀಕ್ಷೆಗೆ ತರಬೇತಿ ಪಡೆದುಕೊಂಡರು.



> ವಿಕಸನ ಫೌಂಡೇಶನ್ ವಿದ್ಯಾಮೃತ 2024 ಕಾರ್ಯಕ್ರಮ ಶ್ಲಾಘನೀಯ. ಉನ್ನತ ಶಿಕ್ಷಣ ಆಕಾಂಕ್ಷಿತ ವಿದ್ಯಾರ್ಥಿಗಳು ನಿರಂತರ ಪರಿಶ್ರಮ ಹಾಕಿ ಓದಿ ಜೀವನದಲ್ಲಿ ಮುಂದೆಬರಬೇಕು.
>
> ■ ಡಾ. ವಿ.ಎ. ಕುಲಕರ್ಣಿ, ಪ್ರಾಚಾರ್ಯ

> ಜೀವನದಲ್ಲಿ ಸಾಫಲ್ಯತೆಯನ್ನು ಕಾಣಲು ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಇಟ್ಟುಕೊಳ್ಳುವುದು ಅಗತ್ಯ. ಆ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕು.
>
> ■ ಪ್ರೊ. ದತ್ತಾತ್ರಿ, ದಾಂಡೇಲಿ ಜಿಟಿಟಿಸಿಯ ಪ್ರಾಂಶುಪಾಲ